**ದಿನಾಂಕಃ 10.03.2026 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತುಃ**

**ಪಾಟೀ ಸವಾಲು: 2 ನೇ ಎದುರುದಾರರ / Insurance company ಪರ ವಕೀಲರಾದ ಶ್ರೀ.VS ರವರಿಂದಃ**

1) ನಾನು ಮತ್ತು ನಮ್ಮ ತಾಯಿಯು ನಮ್ಮ ಸ್ವಂತ ಊರಿನಲ್ಲಿ ಅಂದರೆ ಛತ್ತೀಸಘಡ ರಾಜ್ಯದಲ್ಲಿ ಇರುವ ತಮ್ಮೋರ ಗ್ರಾಮದಲ್ಲಿ ವಾಸವಿದ್ದೇವೆ. ನಾನು ಮತ್ತು ನಮ್ಮ ತಾಯಿಯು ವ್ಯವಸಾಯದ ಕೆಲಸವನ್ನು ಮಾಡುತ್ತೇವೆ. ಅಪಘಾತದಲ್ಲಿ ಮರಣ ಹೊಂದಿರುವ ರಾಮ್ ಸಿಂಗ್ ಈತನು ನನ್ನ ತಮ್ಮ ಆಗಿದ್ದಾನೆ.

2) ಯಾವ ಅಪಘಾತದಲ್ಲಿ ನನ್ನ ತಮ್ಮನಾದ ರಾಮ್ ಸಿಂಗ್ ಈತನು ಗಾಯ ಗೊಂಡಿದ್ದಾನೋ ಮತ್ತು ನಂತರ ಮರಣ ಹೊಂದಿದ್ದಾನೋ ಆ ಅಪಘಾತವನ್ನು ನಾನಾಗಲೀ ಅಥವಾ ನನ್ನ ತಾಯಿ ಆಗಲೀ ನೋಡಿರುವುದಿಲ್ಲ.

3) ಸಾಯುವ ಸಮಯಕ್ಕಿಂತ ಸುಮಾರು **4** ತಿಂಗಳ ಹಿಂದಿನಿಂದಲೂ ನನ್ನ ತಮ್ಮನಾದ ರಾಮ್ ಸಿಂಗ್ ಈತನು ಬೋರ್ ವೆಲ್ ತೋಡುವ ಲಾರಿಯಲ್ಲಿ ಸಹಾಯಕನಾಗಿ ಕೆಲಸ ಮಾಡುತ್ತಿದ್ದನು. ಸಾಯುವ ಸಮಯದಲ್ಲಿ ನನ್ನ ತಮ್ಮನಿಗೆ **17** ವರ್ಷ ವಯಸ್ಸು ಆಗಿತ್ತು ಎಂದರೆ ಸರಿ.

4) ಯಾವ ವ್ಯಕ್ತಿಗಳು ಅಪಘಾತವನ್ನು ನೋಡಿದ್ದಾರೋ ಆ ವ್ಯಕ್ತಿಗಳನ್ನು ನಮ್ಮ ಪರವಾಗಿ ವಿಚಾರಣೆ ಮಾಡಲು ನಮಗೆ ಸಾಧ್ಯ ಇದೆಯೋ ಅಥವಾ ಇಲ್ಲವೋ ಎಂದರೆ ಆ ಅಪಘಾತವನ್ನು ಯಾರು ಯಾರು ನೋಡಿದ್ದಾರೆ ಎಂಬ ವಿಷಯವು ನನಗೆ ತಿಳಿದಿರುವುದಿಲ್ಲ.

5) ಬೋರ್ ವೆಲ್ ತೋಡಲು ಬಳಸುವಂತಹ ಲಾರಿಯ ಮಾಲೀಕರು ಅಪಘಾತದ ವಿಷಯವನ್ನು ನಮಗೆ ದೂರವಾಣಿ ಮೂಲಕ ತಿಳಿಸಿದ್ದಾರೆ.

6) ನನ್ನ ತಮ್ಮನೇ ಮಧ್ಯಪಾನ ಮಾಡಿ ನಂತರ ತನ್ನ ವಾಹನವನ್ನು ಅತ್ಯಂತ ವೇಗದಿಂದ ಚಾಲನೆ ಮಾಡಿದ್ದಾರೆ ಮತ್ತು ತಮ್ಮ ವಾಹನದ ಮೇಲೆ ನಿಯಂತ್ರಣವನ್ನು ಕಳೆದುಕೊಂಡು ಬಿದ್ದು ಗಾಯಗೊಂಡು ನಂತರ ಮರಣ ಹೊಂದಿದ್ದಾರೆ ಎಂದರೆ ಸುಳ್ಳು. ಸಾಕ್ಷಿಯು ಮುಂದುವರೆದು "ಒಂದು ಬೊಲೆರೋ ವಾಹನವು ಡಿಕ್ಕಿ ಹೊಡೆದ ಕಾರಣದಿಂದ ನನ್ನ ತಮ್ಮನು ಮರಣ ಹೊಂದಿದ್ದಾನೆ" ಎಂದು ನುಡಿದಿದ್ದಾರೆ.

7) ಅಪಘಾತದ ಸಂಬಂಧವಾಗಿ ಬೋರ್ ವೆಲ್ ಲಾರಿಯ ಮಾಲೀಕರು ಪೋಲಿಸರಿಗೆ ಫಿರ್ಯಾದನ್ನು ನೀಡಿದ್ದಾರೆ ಮತ್ತು ಸದರಿ ಫಿರ್ಯಾದಿನಲ್ಲಿ ಇಂತಹುದೇ ವಾಹನವು ಅಪಘಾತವನ್ನು ಮಾಡಿದೆ ಎಂಬುದಾಗಿ

ಹೇಳಿರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ.

8) **AP-39-VE-1908** ಸಂಖ್ಯೆಯ ಸರಕು ಸಾಗಾಣಿಕೆ ವಾಹನವು ಯಾವುದೇ ಅಪಘಾತವನ್ನು ಮಾಡಿರುವುದಿಲ್ಲ ಮತ್ತು ನಾನು ಸುಳ್ಳು ಪ್ರತಿಪಾದನೆಯನ್ನು ಮಾಡುತ್ತಿದ್ದೇನೆ ಎಂದರೆ ಸುಳ್ಳು.

9) ನನ್ನ ತಮ್ಮನಾದ ರಾಮ್ ಸಿಂಗ್ ಈತನು ಯಾವುದೇ ಕೆಲಸವನ್ನು ಮಾಡುತ್ತಿರಲಿಲ್ಲ ಮತ್ತು ಒಂದು ತಿಂಗಳಿಗೆ **30** ಸಾವಿರ ರೂಪಾಯಿ ಸಂಪಾದನೆ ಮಾಡುತ್ತಿರಲಿಲ್ಲ ಮತ್ತು ಈ ಬಗ್ಗೆ ನಾನು ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸುಳ್ಳು.

10) ನನ್ನ ತಮ್ಮನ ಅಂತ್ಯಕ್ರಿಯೆ ಮತ್ತು ವೈಕುಂಠ ಸಮಾರಾಧನೆ ಇತ್ಯಾದಿಗಳಿಗೆ **50** ಸಾವಿರ ರೂಪಾಯಿಗಳು ಖರ್ಚು ಆಗಿದೆ ಎಂಬುದಾಗಿ ನಾನು ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸುಳ್ಳು.

11) ಅಪಘಾತದ ಸಂಬಂಧವಾಗಿ ನಾನು ಪೋಲಿಸರಿಗೆ ನನ್ನ ಹೇಳಿಕೆಯನ್ನು ನೀಡಿದ್ದೇನೆ.

12) **AP-39-VE-1908** ಸಂಖ್ಯೆಯ ಸರಕು ಸಾಗಾಣಿಕೆ ವಾಹನದ

ಮಾಲೀಕರು ಮತ್ತು ನನ್ನ ತಮ್ಮನು ಕೆಲಸ ಮಾಡುತ್ತಿದ್ದಂತಹ ಬೋರ್ ವೆಲ್ ಲಾರಿಯ ಮಾಲೀಕರು ಮತ್ತು ಪೋಲಿಸರು ಮತ್ತು ನಾವು ಎಲ್ಲರೂ ಶಾಮೀಲಾಗಿ ಕೇವಲ ಪರಿಹಾರವನ್ನು ಪಡೆಯಬೇಕು ಎಂಬ ಉದ್ದೇಶದಿಂದ **AP-39-VE-1908** ಸಂಖ್ಯೆಯ ಸರಕು ಸಾಗಾಣಿಕೆ ವಾಹನದ ವಿರುದ್ಧ ಸುಳ್ಳು ಪ್ರಕರಣವನ್ನು ಮಾಡಿದ್ದೇವೆ ಮತ್ತು ನಾನು ಈಗ ಸುಳ್ಳು ಪ್ರತಿಪಾದನೆಯನ್ನು ಮಾಡುತ್ತಿದ್ದೇನೆ ಎಂದರೆ ಸುಳ್ಳು.

13) ಮೇಲೆ ನನಗೆ ಸೂಚಿಸಿದ ಹಾಗೆ ಘಟನೆಗಳು ಆಗಿವೆ ಮತ್ತು ಆ ಕಾರಣದಿಂದ ವಿಮಾ ಸಂಸ್ಥೆಯವರು ನಮಗೆ ಯಾವುದೇ ಪರಿಹಾರವನ್ನು ಕೊಡಲು ಜವಾಬ್ದಾರರು ಆಗಿರುವುದಿಲ್ಲ ಎಂದರೆ ಸುಳ್ಳು.

14) ಅಪಘಾತದಲ್ಲಿ ಮರಣ ಹೊಂದಿದ ರಾಮ್ ಸಿಂಗ್ ಈತನು ನನ್ನ ತಮ್ಮ ಆಗಿದ್ದಾನೆ ಎನ್ನುವ ಸಂಬಂಧವಾಗಿ ದಾಖಲೆಗಳನ್ನು ಹಾಜರುಪಡಿಸಲು ತೊಂದರೆ ಇರುವುದಿಲ್ಲ.

<u>**ಪಾಟೀ ಸವಾಲು: 1 ನೇ ಎದುರುದಾರರ ಪರ ವಕೀಲರಿಂದಃ**</u>

ಸದರಿ ಎದುರುದಾರರು ಮತ್ತು ಅವರ ಪರ ವಕೀಲರು ಹಾಜರಿಲ್ಲ. ಆದ ಕಾರಣದಿಂದ ಯಾವುದೇ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**<u>ಮರು ವಿಚಾರಣೆಃ ಇಲ್ಲ.</u>**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ)

**(ಓ.ಹೇ.ಕೇ.ಸ.ಇ)**

**ಮುಖ್ಯ ನ್ಯಾಯಾಧೀಶರು,**
ಲಘು ವ್ಯವಹಾರಗಳ ನ್ಯಾಯಾಲಯ,
ಬೆಂಗಳೂರು.